ಅ) ಬಂದಿದೆ

ಆ) ಶಾಲೆಗಳಲ್ಲಿನ ಮಂಜೂರಾಗಿರುವ ಹುದ್ದೆಗನುಗುಣವಾಗಿ ಹಾಗೂ ವಿದ್ಯಾರ್ಹತೆಗನುಗುಣವಾಗಿ ವೇತನ ಶ್ರೇಣಿಗಳನ್ನು ನಿಗದಿ ಪಡಿಸಲಾಗಿದೆ. ಹುದ್ದೆ ಮಂಜೂರಾತಿಗನುಗುಣವಾಗಿ ಮತ್ತು ವಿದ್ಯಾರ್ಹತೆಗನುಗುಣವಾಗಿ ಇವರುಗಳನ್ನು ನೇಮಕ ಮಾಡಿಕೊಳ್ಳಲಾಗುವುದು. ಆದುದರಿಂದ ಈ ತಾರತಮ್ಯವನ್ನು ಸರಿಪಡಿಸಲು ಪ್ರಸ್ತುತ ನಿಯಮಾನುಸಾರ ಅವಕಾಶವಿರುವುದಿಲ್ಲ.

ಇ) ಮೇಲೆ (ಅ)ನಲ್ಲಿ ಹೇಳಿರುವ ಉತ್ತರದಿಂದ ಈಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳಗಾಂ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿ ಶಿಕ್ಷಕರ ಸಂಖ್ಯೆ

292 (599) ಶ್ರೀ ಬಿ.ಐ. ಪಾಟೀಲ. (ಉಚ್ಚಂಗಾವ್):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಮರಾಠಿ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಈ ಹುದ್ದೆಗಳನ್ನು ಜರೂರಾಗಿ ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಬೆಳಗಾಂ ನಗರವು ಸೇರದಂತೆ ಬೆಳಗಾಂ ತಾಲ್ಲೂಕಿನಲ್ಲಿ ಒಟ್ಟು 27ಮರಾಠಿ ಶಿಕ್ಷಕರ ಹುದ್ದೆಗಳು ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿವೆ.

ಆ) 24 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ಅನ್ವಯ ಆದಷ್ಟು ಬೇಗ ತುಂಬಲಾಗುವುದು.

ರಾಜ್ಯದಲ್ಲಿ ಖಾಲಿಯಿರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಭರ್ತಿ

293 (609) ಶ್ರೀ ಮಂಜುನಾಥ ಕುನ್ನೂರ್ (ಶಿಗ್ಗಾಂವ್):-

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ;

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ;

ಇ) ಶಿಗ್ಗಾಂವ ಮತ್ತು ಸವಣೂರಿನಲ್ಲಿ ಹೆಚ್ಚಿನ ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇರಲು ಕಾರಣಗಳೇನು;

ಈ) ಇದನ್ನು ಎಷ್ಟು ದಿವಸದಲ್ಲಿ ಭರ್ತಿ ಮಾಡಲಾಗುವುದು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) 13,149